3. ಶ್ರೀ ಎ.ಟಿ. ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ/ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಕುರಿತು ಜಂಟಿ ಸದನ ಸಮಿತಿಯ ಮಧ್ಯಂತರ (ಭಾಗ–1) ವರದಿಯನ್ನು ಒಪ್ಪಿಸುತ್ತೇನೆ.

4. ಶ್ರೀ ಶಿವಶಂಕರರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಮಿತಿಯ ಅಧ್ಯಕ್ಷರ ಪರವಾಗಿ 2005–06ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 24ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಈಗ ಸಭೆಯನ್ನು ಊಟಕ್ಕೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ1.30 ಗಂಟೆಗೆ ಮುಕ್ತಾಯಗೊಂಡು ಮಧ್ಯಾಹ್ನ 2.30 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನ: ಮಧ್ಯಾಹ್ನ 2 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳು, ಶಾಸಕರು ಹಾಗೂ ಅಧಿಕಾರಿಗಳು ಸದನದಲ್ಲಿ ಹಾಜರಿಲ್ಲದಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು 2 ಗಂಟೆ 30 ನಿಮಿಷಕ್ಕೆ ಸಭೆ ಕರೆದಿದ್ದೀರಿ. ಸದನ ಸೇರುತ್ತಿರುವ ಮೊದಲನೆ ದಿವಸದಲ್ಲೇ ಮಂತ್ರಿಗಳು ಯಾರೂ ಇಲ್ಲ, ಅಧಿಕಾರಿಗಳೂ ಇಲ್ಲ, ಶಾಸಕರೂ ಇಲ್ಲ. ಏನಿದು ಪರಿಸ್ಥಿತಿ? ಏನು ದುರಂತ ಇಂತಹ ಪರಿಸ್ಥಿತಿ ಸದನಕ್ಕೆ ಎಂದಿಗೂ ಬರಬಾರದು. ಈ ಸದನದ ಗೌರವ, ಗಾಂಭೀರ್ಯ ನಾಶವಾಗಿದೆ. ನಿಮ್ಮ ಶಾಸಕರು ಎಲ್ಲಿ ಹೋಗಿದ್ದಾರೆ? ಅಧಿಕಾರಿಗಳು ಎಲ್ಲಿ ಹೋದರು? ಶಾಸಕರು ಎಲ್ಲಿ ಹೋದರು? ಸತ್ತುಹೋದ ನಿಗಮ, ಮಂಡಳಿಗಳಿಗೆ ಅವರೆಲ್ಲರೂ ಕಾಯ್ದುಕೊಂಡು ಕುಳಿತಿರಬೇಕು. ನಿಮಗೆ ನಾನು ಇದರ ಬಗ್ಗೆ ಎಷ್ಟು ಸಾರಿ ಹೇಳಬೇಕು? ಇದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದು ಸದನ ಪ್ರಾರಂಭವಾಗುತ್ತಿರುವ ಮೊದಲನೇ ದಿವಸವೇ. ಹೀಗೆ ಆದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ಹೊಸ ವರ್ಷದಲ್ಲಿ ಸದನ ಪ್ರಾರಂಭವಾಗಿರುವ ಮೊದಲನೇ ದಿವಸ ಇದಾಗಿದೆ. ಇವೊತ್ತಿನ ದಿವಸವೇ ಇಂತಹ ಪ್ರೇತಕಳೆ! ಇಂತಹ ಪರಿಸ್ಥಿತಿ ಬರಬಾರದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಂತ್ರಿಗಳು ಕಡಿಮೆ ಇದ್ದಾರೆಂದು ಮಂತ್ರಿಮಂಡಲದ ವಿಸ್ತರಣೆ ಮಾಡಿದರು. ಇದೇನು ಕತೆ? ಹೊಸ ಮಂತ್ರಿಗಳಾದರೂ ಬಂದು ಕುಳಿತುಕೊಳ್ಳಬೇಡವೇ?

ಅಧ್ಯಕ್ಷರು: ಮಾನ್ಯ ನಾಗರಾಜ್‌ರವರೆ, ನಾವೇನೂ ಹೇಳುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಬ್ಬರೂ ಅವರವರ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು. ಅಷ್ಟನ್ನು ಮಾತ್ರ ನಾವು ಹೇಳಲು ಸಾಧ್ಯ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ರಾಜಕೀಯವಾಗಿ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳಿಗೂ ಒಬ್ಬರಿಗೊಬ್ಬರಿಗೆ ಆಗುತ್ತಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಬಿರುಕು ಬಿಟ್ಟಿದೆ. ಸಮ್ಮಿಶ್ರ ಸರ್ಕಾರದಲ್ಲಿ ಹೊಂದಾಣಿಕೆ ಇಲ್ಲ. ಅವರ ಪರಿಸ್ಥಿತಿ ಏನು? ಮುಂದೆ ಆಡಳಿತದ ಗತಿಯೇನು? ಅಧಿಕಾರಿಗಳ ಪರಿಸ್ಥಿತಿ ಈ ರೀತಿಯಾದರೆ ನಾಳೆ ಆಡಳಿತದ ಪರಿಸ್ಥಿತಿ ಏನು? ಅಧಿಕಾರಿಗಳಿಗೆ ಈ ವ್ಯವಸ್ಥೆಯೇ ಸಾಕು. ಇದೊಂದು ದುರಂತ. ಇದು ಒಳ್ಳೆಯ ಸೂಚನೆಯಲ್ಲ. ಸದನವನ್ನು ತಾವು ಮುಂದಕ್ಕೆ ಹಾಕಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸದನವನ್ನು ಇಷ್ಟು ಲಘುವಾಗಿ ತೆಗೆದುಕೊಂಡರೆ ಹೇಗೆ? ಮಂತ್ರಿಗಳು ಇದ್ದಾರೆಂದು ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿದ್ದಾರೆ. ವಿಸ್ತರಣೆಯಾದ ನಂತರವೂ ಹೊಸಬರಾದರೂ ಇಲ್ಲಿ ಬಂದು ಕುಳಿತುಕೊಳ್ಳಬಾರದೇ?

ಅಧ್ಯಕ್ಷರು: ಮಾನ್ಯ Chief Whip ಇದ್ದಾರೇನ್ರಿ? ನೋಡಿ, ನಿಮ್ಮ ಶಾಸಕರುಗಳಿಲ್ಲ. ಬಹಳಷ್ಟು ಕುರ್ಚಿಗಳು ಖಾಲಿ ಇವೆ. ನಿಮ್ಮ ಬಹಳಷ್ಟು ಮಂತ್ರಿಗಳೂ ಇಲ್ಲ. ಒಂದಿಬ್ಬರು, ಮೂವರು ಮಂತ್ರಿಗಳಿದ್ದಾರೆ. ಇದು ಯಾರಿಗೂ ಶೋಭೆ ತರತಕ್ಕಂಥಾದ್ದಲ್ಲ. ಅವರನ್ನು ಬೇಗ ಕರೆಸಿ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಹತ್ವವಾದ ಚರ್ಚೆ ಪ್ರಾರಂಭ ಮಾಡುವುದಕ್ಕೆ ಹೋಗುತ್ತಿದ್ದೇವೆ. ನೀವು ಚಳಿಗಾಲದ ಅಧಿವೇಶನವನ್ನು ನಡೆಸಬೇಕಾಗಿತ್ತು. ಅದೂ ಕೂಡ ನಡೆಯಲಿಲ್ಲ. ರಾಜ್ಯದ ಬಹಳಷ್ಟು ಮಹತ್ವದ ವಿಚಾರಗಳ ಬಗ್ಗೆ ನಾವೆಲ್ಲರೂ ಪ್ರಸ್ತಾಪಿಸಿ ಹೇಳಿದ್ದೇವೆ. ಈಗಾಗಲೇ 2005ರಲ್ಲಿ ಒಂದು Act ಪಾಸ್ ಮಾಡಿದ್ದೇವೆ. Atleast, 60 ದಿವಸಗಳಾದರೂ ಸದನವನ್ನು ನಡೆಸಬೇಕು. ಬಹಳ ದಿವಸಗಳಾದ ನಂತರ ಇವೊತ್ತು ಸದನ ಸೇರುತ್ತಿದೆ. ಇವೊತ್ತು ವಿರೋಧ ಪಕ್ಷದ ಸ್ನೇಹಿತರೆಲ್ಲರೂ ಹೇಳಿದಂತೆ, ಕುರ್ಚಿಗಳೆಲ್ಲವೂ ಖಾಲಿ ಇವೆ.

ಯಾರಾದರೂ ಜವಾಬು ಕೊಡತಕ್ಕಂಥ ರೀತಿಯಲ್ಲಿ, ಸರ್ಕಾರದ ಜವಾಬ್ದಾರಿಯುತರಾದವರು ಯಾರೂ ಇಲ್ಲ. ಇಂತಹ ಮಹತ್ವವಾದ ಬರಗಾಲದ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಇಡೀ ರಾಜ್ಯದ ಎಲ್ಲಾ ಕಡೆಗಳಲ್ಲೂ ಸ್ಮಶಾನದ ರೀತಿಯಲ್ಲಿ ವಾತಾವರಣ ನಿರ್ಮಾಣವಾಗಿದೆ. ಪತ್ರಿಕೆಗಳಲ್ಲಿನ ಹೇಳಿಕೆ ಮುಖಾಂತರ ಹೇಳಬಹುದು. ಇವೊತ್ತು ಕನ್ನಡ ಪ್ರಭದಲ್ಲಿ ಹಿರಿಯ ಪತ್ರಕರ್ತರಾದ ಸತ್ಯರವರೂ ಕೂಡ ಬರೆದಿದ್ದಾರೆ. ಎಲ್ಲಾ ಕಡೆ ಹಣ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಅದರ ಬಗ್ಗೆ ಇವೊತ್ತು ಪ್ರಸ್ತಾಪ ಮಾಡಲು ನಿಂತಿದ್ದೇನೆ. 128 ತಾಲ್ಲೂಕುಗಳಲ್ಲಿ ಇರತಕ್ಕಂಥ ಬರದ ಪರಿಸ್ಥಿತಿ, ಕೇಂದ್ರದಿಂದ ಬಂದಂಥ ಹಣ, ಇವೆಲ್ಲದರ ಬಗ್ಗೆಯೂ ನಾವು ಸಮಗ್ರವಾಗಿ ಚರ್ಚೆ ಮಾಡಬೇಕಾಗಿದೆ. ನಾನು ಈಗ ಹೇಳುವುದೇನೆಂದರೆ, ತಾವು ಸದನವನ್ನು ಮುಂದೂಡಬೇಕು. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳನ್ನು ಕರೆಸಿರಿ. ಈ ಸದನದಲ್ಲಿ ಎಲ್ಲಾ ಮಂತ್ರಿಗಳಿದ್ದರೆ ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಈ ತರಹ empty chairs ಯಾವ ಕಾಲದಲ್ಲೂ ಆಗಿಲ್ಲ. ನಿಮ್ಮ ಕಾಲದಲ್ಲಿ ಈ ತರಹದ ಘಟನೆ ನಡೆಯುತ್ತಿದೆ. ಬಹಳಷ್ಟು ರಾಜಕೀಯ ವಿಷಯಗಳಿದ್ದರೂ ಅದನ್ನು ಪ್ರಸ್ತಾಪ ಮಾಡುವುದಕ್ಕೆ ನಾವು ನಿಂತಿಲ್ಲ. ಇವೊತ್ತು ನಮ್ಮ ರಾಜ್ಯದ ರೈತರು ಮತ್ತು ಬಡವರ ಕಷ್ಟಗಳನ್ನು ಈ ಸರ್ಕಾರಕ್ಕೆ ತಿಳಿಸುವುದಕ್ಕೆ ನಿಂತಿದ್ದೇನೆ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಿನ್ನೆಯ ಪತ್ರಿಕೆಗಳಲ್ಲಿ ಸಾಕಷ್ಟು ಬಂದಿದೆ. ಅದರ ಬಗ್ಗೆ ನಾವು ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ, ಇದರ ಬಗ್ಗೆ ಪೂರ್ತಿ ಪರಿಣಾಮ ಏನಾಗುತ್ತದೆ ಎಂಬುದು ಗೊತ್ತಿದೆ. ಅದಕ್ಕೋಸ್ಕರ, ಸದನವನ್ನು ಮುಂದೂಡಿ. ತಮ್ಮ ಕೊಠಡಿಗೆ ಎಲ್ಲರನ್ನೂ ಕರೆಸಿರಿ. ಗಂಭೀರವಾದ ಚರ್ಚೆ ಆಗಬೇಕು. If they are very serious about running the Government, they must come and sit and listen whatever we are telling.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಸದನದಲ್ಲಿ 6–7 ಸಚಿವರುಗಳಿದ್ದೇವೆ. ಸರ್ಕಾರದ ಪರವಾಗಿ ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಬರದ ಬಗ್ಗೆ ಪ್ರತಿಪಕ್ಷದ ನಾಯಕರು ಯಾವ ರೀತಿ ಗಂಭೀರವಾಗಿ ತೆಗೆದುಕೊಂಡಿದ್ದಾರೋ, ನಾವು ಕೂಡ ಅಷ್ಟೇ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಅದಕ್ಕೋಸ್ಕರ, ಚರ್ಚೆಗೆ ಎಲ್ಲಾ ರೀತಿಯಿಂದಲೂ ಉತ್ತರ

ಕೊಡುವುದಕ್ಕೆ ತಯಾರಿದ್ದೇವೆ. ಅವರು ಚರ್ಚೆ ಮಾಡಲಿ. ಮುಖ್ಯಮಂತ್ರಿಗಳು ಬರುತ್ತಾರೆ. ಉತ್ತರ ಕೊಡುವುದಕ್ಕೆ ನಾವಿದ್ದೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ರೆವಿನ್ಯೂ ಮಂತ್ರಿಗಳು ಮತ್ತು ಇನ್ನಿತರ 2–3 ಸಚಿವರುಗಳಿದ್ದಾರೆ. ಸದನ ನಡೆಸುವುದರ ಬಗ್ಗೆ ನೀವೂ ಕೂಡ ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬಾರದು. ನೀವು ಅವರಿಗೆ ನಗುತ್ತಾ ಹೇಳಿದರೆ ಅವರಿಗೆ ಎಲ್ಲಿ ಗಾಂಭೀರ್ಯ ಬರುತ್ತದೆ? ನಾವೂ ಈ ಕಡೆ ನಗುತ್ತಿದ್ದೇವೆ. ಅತ್ತ ಕಡೆ ನೋಡಿ ನೀವೂ ನಗುತ್ತಿದ್ದೀರಿ. ನಮಗೆ ಇಲ್ಲಿ ಕತೆ ಏನಾಗಿದೆಯೆಂದರೆ, this is a serious matter.

ಅಧ್ಯಕ್ಷರು: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಳುವ ಪಕ್ಷವಾಗಲಿ, ಪ್ರತಿಪಕ್ಷವಾಗಲಿ, ಅವರವರ ಜವಾಬ್ದಾರಿ ಅವರವರಿಗೆ ಗೊತ್ತಿರಬೇಕು. ಜವಾಬ್ದಾರಿ ಗೊತ್ತಿರದಿದ್ದರೆ, ಮುಂದೆ ಜನರು ನಿರ್ಧಾರ ಮಾಡುತ್ತಾರೆ. ಅವರು ತಪ್ಪು ಮಾಡಿದರೂ ಅಷ್ಟೆ, ಇವರು ತಪ್ಪು ಮಾಡಿದರೂ ಅಷ್ಟೇ, ಎರಡೂ ಒಂದೇ. ಇನ್ನೇನು ಹೇಳೋಣ? ಅವರನ್ನು ಕರೆಸಬೇಕೆಂದು ನಾನು ಹೇಳಿದೆ. ನಿಮ್ಮ ಶಾಸಕರುಗಳಿಲ್ಲ, ಮಂತ್ರಿಗಳಿಲ್ಲ, ಕರೆಸಿರಿ ಎಂದು ಹೇಳಿದ್ದೇನೆ. ಇನ್ನೇನು ಹೇಳಬೇಕು?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, With due respect to your Chair ...

ಅಧ್ಯಕ್ಷರು: ನಾವು respect ಕೊಟ್ಟೇ ಮಾತನಾಡುವುದು.

ಶ್ರೀ ಸಿದ್ದರಾಮಯ್ಯ: ನೀವು ಹಾಗೆ ಹೇಳುವುದಕ್ಕಾಗುವುದಿಲ್ಲ. ಜನರು ಉತ್ತರ ಕೊಡುತ್ತಾರೆಂದು. ಚುನಾವಣೆಯಲ್ಲಿ ಏನಾಗುತ್ತದೆ ನೀವು ಈ ಸದನದ ಘನತೆ– ಗಾಂಭೀರ್ಯವನ್ನು ಎತ್ತಿ ಹಿಡಿಯಬೇಕಾದವರು.

ಅಧ್ಯಕ್ಷರು: ನಿಮ್ಮೆಲ್ಲರನ್ನೂ ಜನರು ಆರಿಸಿ ಕಳಿಸಿದ್ದಾರೆ. ನಿಮಗೆ ಜವಾಬ್ದಾರಿ ಇರಬೇಕು.

ಶ್ರೀ ಸಿದ್ದರಾಮಯ್ಯ: ನಾವು ನಿಮ್ಮ ಮೇಲೆ ವಿಶ್ವಾಸವಿಡಬೇಕಾಗುತ್ತದೆ. ಅದಕ್ಕೋಸ್ಕರ, ಸರ್ಕಾರ ನಡೆಸುವವರಿಗೆ ನೀವು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು: ನಾನು ಸ್ಪಷ್ಟವಾಗಿ ಹೇಳಿಲ್ಲವೇ? ನಾನು ಇನ್ಯಾವ ಪದಗಳಲ್ಲಿ ಹೇಳಬೇಕು?

ಶ್ರೀ ಸಿದ್ದರಾಮಯ್ಯ: ಇವೊತ್ತು ಅತ್ಯಂತ ಪ್ರಮುಖವಾಗಿ ಜನತೆಗೆ ಸಂಬಂಧಪಟ್ಟ ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೇ ಅಥವ ಬೇಡವೇ?

3.00 P.M

ಅಧ್ಯಕ್ಷರು: ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದನ್ನು ನಾನು ಒಪ್ಪುತ್ತೇನೆ. ಅದಕ್ಕೋಸ್ಕರವೇ, ನಾನು ಕರೆದುಕೊಂಡು ಬನ್ನಿ ಎಂದು ಹೇಳಿದ್ದು.

ಶ್ರೀ ಸಿದ್ದರಾಮಯ್ಯ: ಆರು ತಿಂಗಳ ನಂತರ ನಾವು ಸೇರುತ್ತಿರುವುದು. ಈಗಲೂ ಇದರ ಬಗ್ಗೆ ಸರ್ಕಾರಕ್ಕೆ seriousness ಇಲ್ಲವೆಂದರೆ, ಮತ್ತೆ ಸಮಸ್ಯೆಗಳನ್ನು ಎಲ್ಲಿ ಚರ್ಚೆ ಮಾಡುವುದು? ಸದನ ಏಕೆ ಕರೆಯಬೇಕು? ಸುಮ್ಮನೆ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿಕೊಂಡು, ಅವರೂ ಮಾಡಿಕೊಂಡು ಇದ್ದರೆ ಮುಗಿದುಹೋಯಿತು. ಈ ಸದನವೂ ಬೇಕಾಗಿಲ್ಲ, ಚರ್ಚೆಯೂ ಮಾಡಬೇಕಾಗಿಲ್ಲ. ಒಂದು ಆಕ್ಟ್ ಅನ್ನು ನಾವು ಪಾಸ್ ಮಾಡಿದ್ದೇವೆ. ಇಂತಿಷ್ಟು ದಿವಸ ಸದನ ನಡೆಯಬೇಕೆಂದು ಇಲ್ಲಿಯೇ ಕಾನೂನು ಮಾಡಿದ್ದೇವೆ. ಕಾನೂನು ಗಾಳಿಗೆ ತೂರಿ ಹೋಗುತ್ತದೆ. ಅದನ್ನು protect ಮಾಡುವವರು ಯಾರು? ಅದನ್ನು implement ಮಾಡಬೇಕಾಗಿರುವವರು ಯಾರು? ನೀವೇ ಮಾಡಬೇಕು. ಅದಕ್ಕೋಸ್ಕರ, ನಿಮ್ಮಲ್ಲಿ ಮನವಿ ಏನೆಂದರೆ, ನಿಮ್ಮ ಆದೇಶವನ್ನಾದರೂ ಸರ್ಕಾರ serious ಆಗಿ ತೆಗೆದುಕೊಳ್ಳಬೇಕೇ ಬೇಡವೇ? ಅದನ್ನು ಮಾಡಬೇಕೆನ್ನುವುದೇ ನಮ್ಮ ಮನವಿ. ಅದನ್ನು ನೀವು ದಯವಿಟ್ಟು ಮಾಡಬೇಕು.

ಅಧ್ಯಕ್ಷರು: ಹೇಳಿ ಕಳುಹಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸದನದ ಗಾಂಭೀರ್ಯ ಮತ್ತು ಪಾವಿತ್ರತೆಯನ್ನು ಕಾಪಾಡಬೇಕಾದ್ದು ತಮ್ಮ ಕರ್ತವ್ಯ. ಈ ಸದನಕ್ಕೆ ಬಹಳ ಪ್ರಾಮುಖ್ಯವಾಗಿ ಇರತಕ್ಕವರು ಅಧ್ಯಕ್ಷರಾದ ತಾವು. ಈ ಪರಿಸ್ಥಿತಿಯಾದಾಗ ಸದಸ್ಯರುಗಳಿಗೆ ಒಂದು ಸಲ ಯಾವಾಗಲಾದರು ತಾವು ಬಿಸಿಯನ್ನು ಮುಟ್ಟಿಸಿದರೆ ಈ ಸದನ ಸರಿಯಾಗುತ್ತದೆ. ನಾನು 1967ರಿಂದ ಇಲ್ಲೇ ಕುಳಿತಿದ್ದೇನೆ. ಇದೇ ರೀತಿ ಕುಳಿತಿದ್ದೇನೆ.

ಅಧ್ಯಕ್ಷರು: ಬಿಸಿ ಎಂದರೆ ಹೇಗೆ ಮುಟ್ಟಿಸಬೇಕು? ಅವರಿಗೆ ಹೇಳಬಹುದು. ಎಲ್ಲರಿಗೂ ಜವಾಬ್ದಾರಿ ಇಲ್ಲವೆ? ಜನರು ಅವರನ್ನೆಲ್ಲ ಆರಿಸಿ ಕಳುಹಿಸಿಲ್ಲವೇ? ಎರಡು ಲಕ್ಷ ಮತದಾರರು ಅವರನ್ನು ಆರಿಸಿ ಕಳುಹಿಸಿಲ್ಲವೇ? ಅವರು ಸದನಕ್ಕೆ ಬರಬಾರದೇ? ಕುಳಿತುಕೊಳ್ಳಬಾರದೇ? ಅವರು ಕೇಳಬಾರದೇ?

ಶ್ರೀ ಸಿದ್ಧರಾಮಯ್ಯ: ನಿಮ್ಮ ಕೈಯಲ್ಲಿ ಆಗುವುದಿಲ್ಲವೆಂದರೆ ಸದನವನ್ನು ನಡೆಸುವುದೇ ಬೇಡ ಬಿಡಿ. ಹಾಗಾದರೆ adjourn ಮಾಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರು ದಯಮಾಡಿ ಕೇಳಿ, ಪ್ರತಿಯೊಬ್ಬರಿಗೂ ಜವಾಬ್ದಾರಿ ಇದೆ. ಈ ಕಡೆಯವರಿಗೂ ಇದೆ ಆ ಕಡೆಯವರಿಗೂ ಇದೆ. ಆಳುವ ಪಕ್ಷದವರು ಜಾಸ್ತಿ ಜನ ಇಲ್ಲ, ಮಂತ್ರಿಗಳು ಇಲ್ಲ, ಕರೆದುಕೊಂಡು ಬನ್ನಿ ಎಂದು ಹೇಳಿದ್ದೇನೆ. ಅವರು ಬರುತ್ತಾರೆ. ದಯಮಾಡಿ ಆರಂಭ ಮಾಡಿ.

ಶ್ರೀ ಆರ್.ವಿ.ದೇಶ್‌ಪಾಂಡೆ: ಮಾನ್ಯ ಅಧ್ಯಕ್ಷರೆ, ತಾವು ಬಹಳ ಗೌರವ ಸ್ಥಾನದಲ್ಲಿ ಕುಳಿತಿದ್ದೀರಿ. ಈ ಮನೆಯನ್ನು ನಡೆಸುವ ಜವಾಬ್ದಾರಿ ನಿಮ್ಮ ಮೇಲಿದೆ. ಅದು ನಮ್ಮ ಮೇಲೆ ಇಲ್ಲ. ನಾವು ತಪ್ಪು ಮಾಡಿದ್ದರೂ ಅವರು ತಪ್ಪು ಮಾಡಿದ್ದರೂ ತಾವು ಹೇಳಬೇಕಾಗುತ್ತದೆ. ಸಾಲ ಮನ್ನಾ ಮಾಡುತ್ತೇವೆ, ಮತ್ತೊಂದನ್ನು ಮಾಡುತೇವೆಂದು ಹೊರಗಡೆ ಹೇಳುತ್ತಾರೆ. ಆದರೆ ಸದನ ಕರೆದ ನಂತರ ಮೊದಲನೆಯ ದಿವಸವೇ ಈ ರೀತಿಯ ಪರಿಸ್ಥಿತಿಯಾದರೆ ಸದನವನ್ನು ಹೇಗೆ ನಡೆಸಬೇಕು? ಈ ರೀತಿಯಾದರೆ ಸದನವನ್ನು ನಡೆಸುವ ಅವಶ್ಯಕತೆ ಏನಿದೆ? ಆದ್ದರಿಂದ ತಾವು pull-up ಮಾಡಬೇಕಾಗುತ್ತದೆ.

ಶ್ರೀ ಆರಗಜ್ಞಾನೇಂದ್ರ: ನಾವು ಇಪ್ಪು ಜನ ಶಾಸಕರು ಇದ್ದೇವೆ. 8–9 ಜನ ಮಂತ್ರಿಗಳು ಇದ್ದಾರೆ. ಇನ್ನೂ ಎಷ್ಟು ಜನ ಮಂತ್ರಿಗಳು ಭಾಷಣಕ್ಕೆ ಬೇಕು? ಕೋರಂ ಇದ್ದರೆ ಆಯಿತು. ಕೋರಂ ಎಂದು ಏಕೆ ಮಾಡಿದರು?

(ಗೊಂದಲ)

ಅಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೇ, ಅವರು ಏನು ಹೇಳುತ್ತಿದ್ದಾರೆಂದರೆ, ಆಳುವ ಪಕ್ಷಕ್ಕೆ ವಿರೋಧ ಪಕ್ಷಕ್ಕಿಂತ ಹೆಚ್ಚಿನ ಜವಾಬ್ದಾರಿ ಇದೆ. ಆ ಜವಾಬ್ದಾರಿ ಎದ್ದು ಕಾಣುತ್ತಿಲ್ಲ ಎಂಬುದು ಅವರ ಪದಗಳಿಂದ ವೇದ್ಯವಾಗುತ್ತದೆ. ಅದು ತಮಗೊ ಅರ್ಥವಾಗಿದೆ. ಆದ್ದರಿಂದ ಶಾಸಕರುಗಳು ಈ ಕಡೆಯೂ ಇಲ್ಲ ಆ ಕಡೆಯೂ ಇಲ್ಲ, ಊಟ ಮಾಡಿ ಮಲಗಿಬಿಟ್ಟಿದ್ದಾರೋ ಏನೋ ಗೊತ್ತಿಲ್ಲ! ಸ್ವಲ್ಪ rest ತೆಗೆದುಕೊಂಡು ಬರುತ್ತಾರೆ. ಸಂಬಂಧಪಟ್ಟಂಥ ಮಂತ್ರಿಗಳಾದರೂ ಇರಬೇಕಲ್ಲ?

ಶ್ರೀ ಆರ್.ವಿ.ದೇಶ್‌ಪಾಂಡೆ: ಮಾನ್ಯ ಜ್ಞಾನೇಂದ್ರರವರೆ, ತಾವು ಇಲ್ಲಿ ಇದ್ದಾಗ ಅದನ್ನೇ ಮಾಡುತ್ತಿದ್ದಿರಿ. Officers galleryನ್ನು ನೋಡಿ, ಒಬ್ಬರಾದರೂ revenue officer ಇದ್ದಾರ ನೋಡಿ? Revenue Department ನವರು ಎಷ್ಟು ಅಧಿಕಾರಿಗಳು ಇದ್ದಾರೆ ನೋಡಿ? Note ತೆಗೆದುಕೊಳ್ಳುವವರು ಯಾರು? Record ಮಾಡುವವರು ಯಾರು ಹೇಳಿ?

ಅಧ್ಯಕ್ಷರು: ನಾನು ಹೇಳಿ ಕಳುಹಿಸಿದ್ದೇನೆ. ಈಗ ಕಂದಾಯ ಸಚಿವರು ಇದ್ದಾರೆ. ತಾವು ಚರ್ಚೆಯನ್ನು ಆರಂಭ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಇಷ್ಟೊಂದು ಲಘುವಾಗಿ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು: ಬಹಳ ಜನ ಶಾಸಕರು ಈ ಕಡೆ ಮತ್ತು ಆ ಕಡೆ ಎರಡೂ ಕಡೆಯೂ ಇಲ್ಲ. ಬರುತ್ತಾರೆ.

ಶ್ರೀ ಸಿದ್ಧರಾಮಯ್ಯ: ಈ ಕಡೆ ಆ ಕಡೆ ಎಂದು ತಾವು compare ಮಾಡುವುದಲ್ಲ.

ಅಧ್ಯಕ್ಷರು: ನಾನು ಬೇರೆ ಮಂತ್ರಿಗಳನ್ನೂ ಕರೆಸಿ ಎಂದು ಹೇಳಿದ್ದೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಆರಂಭ ಮಾಡಿ.

ಶ್ರೀ ಸಿದ್ಧರಾಮಯ್ಯ: ಇಲ್ಲ. ಕೊನೆಯ ಪಕ್ಷ Revenue Secretary ಇಲ್ಲ, Chief Secretary ಎಲ್ಲಿ? Revenue Secretary ಎಲ್ಲಿ? Where is the Chief Secretary? Where is the Revenue Commissioner?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅವರು ಬರುತ್ತಾರೆ. ತಾವು ಪ್ರಾರಂಭ ಮಾಡಿ.

ಶ್ರೀ ಸಿದ್ಧರಾಮಯ್ಯ: ನಿಮ್ಮ ಅಧಿಕಾರಿಗಳು ಬಂದು ಏನು ಮಾಡುತ್ತಾರೆ?

ಶ್ರೀ ಜಗದೀಶ್ ಶೆಟ್ಟರ್: ಮಂತ್ರಿಗಳಿದ್ದೇವೆ. ಮಾನ್ಯ ಮುಖ್ಯ ಮಂತ್ರಿಯವರು ಬರುತ್ತಾರೆ. ಚರ್ಚೆ ಪ್ರಾರಂಭ ಮಾಡಿ.

ಅಧ್ಯಕ್ಷರು: ಮಂತ್ರಿಗಳು ಒಬ್ಬೊಬ್ಬರೇ ಬರುತ್ತಿದ್ದಾರೆ ಮಾತನಾಡಿ. ದಯಮಾಡಿ ವಿರೋಧ ಪಕ್ಷಕ ನಾಯಕರು ಆರಂಭ ಮಾಡಿ.

ಶ್ರೀ ಆರಗಜ್ಞಾನೇಂದ್ರ: ವಿಷಯ ಪ್ರಸ್ತಾಪ ಮಾಡಲು ಹೇಳಿ.

ಶ್ರೀ ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, Chief Secretary ಇಲ್ಲ. Principal Secretary, Revenue ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ಇದ್ದಾರೆ.

ಶ್ರೀ ಆರ್. ರೋಷನ್ ಬೇಗ್: ಎಲ್ಲಿದ್ದಾರೆ? ಜಾಮ್‌ದಾರ್ ರವರು ಎಲ್ಲಿದ್ದಾರೆ?

ಶ್ರೀ ಜಗದಿಶ್ ಶೆಟ್ಟರ್: ಬರಗಾಲದ ವಿಷಯದ ಬಗ್ಗೆ ಏನು ಒಂದು ಸಮಸ್ಯೆ ಇದೆ ಅದರ ಚಿಂತನೆಯಲ್ಲಿ ಅವರು ಇದ್ದಾರೆ. ಬರಗಾಲ ನಿರ್ವಹಣೆಯ ಬಗ್ಗೆ Secretary ಬೇರೆ ಇದ್ದಾರೆ. ಅವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ: ಅಧಿಕಾರಿಗಳು ಇರಬೇಕೆಂದು ಹೇಳುತ್ತಿರೋ, ಬೇಡ ಎಂದು ಹೇಳುತ್ತೀರೋ?

ಶ್ರೀ ಜಗದೀಶ್ ಶೆಟ್ಟರ್: ಇರಬೇಕು.

ಶ್ರೀ ಸಿದ್ದರಾಮಯ್ಯ: ಮತ್ತೆ? ಹೇಳಿ ಕರೆಯಿಸಿ.

ಶ್ರೀ ಜಗದೀಶ್ ಶೆಟ್ಟರ್: ಬಂದಿದ್ದಾರೆ.

ಶ್ರೀ ಸಿದ್ದರಾಮಯ್ಯ: ತಾವು ವಿರೋಧ ಪಕ್ಷದ ನಾಯಕರಾಗಿದ್ದವರು. ಅಧಿಕಾರಿಗಳು ಇರಬೇಕೋ ಬೇಡವೋ?

ಶ್ರೀ ಎಂ.ಪಿ.ರೇಣುಕಾಚಾರ್ಯ: ಇಲ್ಲಿ ವಿರೋಧ ಪಕ್ಷದ ನಾಯಕರು ಎಂಬ ಬಗ್ಗೆ ಚರ್ಚೆ ಬೇಕಾಗಿಲ್ಲ. ಕಾಲಹರಣ ಮಾಡಿ ಸಭಾತ್ಯಾಗ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ಜಾಗ ಯಾವುದು? ಸದನದಲ್ಲಿ ಎಲ್ಲೆಂದರಲ್ಲಿ ನಿಂತುಕೊಂಡು ಮಾತನಾಡಿಬಿಡುವುದೇ? ಅವರ ಜಾಗ ಯಾವುದು? ಅವರು ಮಾತನಾಡುವುದು ಎಲ್ಲಿ? ಈ ಸದನಕ್ಕೇನು ಘನತೆ ಗೌರವ ಇಲ್ಲವೇ? ಆ ರೀತಿ ಮಾಡಬಾರದು.

ಅಧ್ಯಕ್ಷರು: ನಾವು ತರಬೇತಿಯನ್ನು ಕೊಟ್ಟಿವು. ಇನ್ನೇನು ಮಾಡಲು ಆಗುತ್ತದೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದು ಸರಿಯಲ್ಲ. ಈ ಸದನಕ್ಕೆ ಘನತೆ ಗೌರವವಿದೆ. ಅವರು ನಿಂತುಕೊಂಡು ಮಾತನಾಡುವುದು ಎಲ್ಲಿ?

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಆರಂಭ ಮಾಡಿ.

ಶ್ರೀ ಎನ್.ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು light ಆಗಿ ತೆಗೆದುಕೊಳ್ಳಬೇಡಿ. ಮುಖ್ಯಮಂತ್ರಿಯವರು ಮತ್ತು ಉಪ ಮುಖ್ಯಮಂತ್ರಿಯವರೂ ಇಲ್ಲ. ಉಪಮುಖ್ಯಮಂತ್ರಿಯವರೇ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಇವತ್ತು Revenue minister ರವರು ಬಂದಿದ್ದಾರೆ ಅದನ್ನು ಒಪ್ಪುತ್ತೇವೆ. Chief secretary ಎಲ್ಲಿ? Principal Secretary

ಇಲ್ಲ? ಸಂಬಂಧಪಟ್ಟ ಅಧಿಕಾರಿಗಳ್ಯಾರೂ ಗ್ಯಾಲರಿಯಲ್ಲಿ ಕಾಣುತ್ತಿಲ್ಲ. ನಾವು ಯಾರಿಗೆ ಹೇಳಬೇಕು? ನಿಮಗೆ ಹೇಳಬೇಕೆ? ನಿಮ್ಮ ಮೂಲಕ ಈ ಸರ್ಕಾರಕ್ಕೆ ಹೇಳಬೇಕಾದರೆ ಜವಾಬ್ದಾರಿ ಸ್ಥಾನದಲ್ಲಿರುವ ಎಲ್ಲರೂ ಬೇಕು. ಯಾವಾಗ ಅವರು ಇಲ್ಲ ಎಂದರೆ ಚರ್ಚೆ ನಿರರ್ಥಕವಾಗುತ್ತದೆ. ಚರ್ಚೆಗೆ ಏನು ಮಹತ್ವ ಬರುತ್ತದೆ?

ಅಧ್ಯಕ್ಷರು: ಮಾನ್ಯ ಕಂದಾಯ ಸಚಿವರು ಇದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ಎನ್.ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಆದ್ದರಿಂದ ಸದನವನ್ನು ಮುಂದೂಡಿ. ಎಲ್ಲರೂ ಬರಬೇಕು. ಚರ್ಚೆಯಲ್ಲಿ ಪಾಲ್ಗೋಳ್ಳಬೇಕು. ಇಲ್ಲದಿದ್ದರೆ ಮಾಡಲು ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕೌನ್ಸಿಲ್‌ನಲ್ಲಿ ಸಹ ಕೆಲವು ಭಿನ್ನಾಭಿಪ್ರಾಯ ಇದ್ದದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಲ್ಲಿಕಾರ್ಜನ ಖರ್ಗೆಯವರೋಂದಿಗೆ ಮಾನ್ಯ ಮುಖ್ಯಮಂತಿಯವರು ಮಾತನಾಡಿದರೆ ಏನಾದರು ಪರಿಹಾರವನ್ನು ಕಂಡುಹಿಡಿಯಬಹುದು ಎಂದು ಅಲ್ಲಿಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಬೇಡಿಕೊಂಡರು. ಈವತ್ತು ಇಲ್ಲಿ Adjournment motion ಇರುವುದರಿಂದ ಪ್ರಾಯಶ: ಇಲ್ಲಿ ಸಿಕ್ಕುತ್ತಾರೆ, ಸಿಕ್ಕಿದರೆ ಮಾತನಾಡೋಣವೆಂದು ಅಲ್ಲಿ ನಿಂತುಕೊಂದ್ದೆವು. ಆದ್ದರಿಂದ ಸದನ ನಡೆಯಲಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, Leader of the Opposition ಬಹಳ ಮಹತ್ವದ ವಿಚಾರ ಹೇಳುತ್ತಿದ್ದಾರೆ. Finance Minister ಇಲ್ಲ. Revenue Minister ಇದ್ದಾರೆ. Finance Minister ಇಲ್ಲ. Chief Secretary , Principal Secretary, Revenue Secretary ಯವರು ಇಲ್ಲ. ಹೀಗಾದರೆ ಯಾರಿಗೆ ಹೇಳಬೇಕು? Leader of the Opposition ಯಾರಿಗೆ ಹೇಳಬೇಕು?

ಶ್ರೀ ಎಂ.ಪಿ. ಪ್ರಕಾಶ್: ಕಂದಾಯ ಕಾರ್ಯದರ್ಶಿಗಳು ಇದ್ದಾರೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ Principal Secretary, Chief Secretary ಏಕೆ ಬರುವುದಿಲ್ಲ? An important matter has been raised by the Leader of the Opposition that too about moving the adjournment motion regarding the drought. ಇಂಥ

ವಿಚಾರವನ್ನು ಹೇಳುವಾಗ ಒಬ್ಬರೂ ಇಲ್ಲ ಎಂದರೆ ಸರ್ಕಾರಕ್ಕೆ ಜಾವಾಬ್ದಾರಿ ಇದೆಯೋ ಇಲ್ಲವೋ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ತಾವು ಈ ಹಿಂದೆ Revenue ಮಂತ್ರಿಯಾಗಿದ್ದವರು. ಈಗ ಸಂಸದೀಯ ಸಚಿವರಾಗಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಸಿದ್ದರಾಮಯ್ಯನವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಯಾರ್ಯಾರು ತಮ್ಮತಮ್ಮ ಕೆಲಸಕಾರ್ಯಗಳೊಳಗಡೆ ಮೊದಲ ಸಂದರ್ಭದಲ್ಲಿ ಇದ್ದಂಥ ರೀತಿಯಲ್ಲೇ ಒಬ್ಬ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಕೂಡ ಇಟ್ಟಿರುತ್ತೇವೆ. ಅವರು ಬೇರೆಯವರು ಕೂಡ ಇದ್ದಾರೆ. ಇದರ ಜೊತೆಗೆ Revenue Secretaryಯವರು ಬೆಳಿಗ್ಗೆಯಿಂದಲೂ ಇದ್ದಾರೆ. ನಾನು ಬರಗಾಲ ಕಾಮಗಾರಿಯ ಉಸ್ತುವಾರಿಯನ್ನೂ, ಸಚಿವಸಂಪುಟ ಸಭೆಯ ಅಧ್ಯಕ್ಷನಾಗಿಯೂ ಕೆಲಸ ನಿರ್ವಹಿಸುತ್ತಿದ್ದೇನೆ. ಈ ವಿಚಾರದಲ್ಲಿ ಕಂದಾಯ ಮಂತ್ರಿಗಳೂ ಉತ್ತರ ಕೊಡಲು ಸಿದ್ಧರಾಗಿ ಬಂದಿದ್ದಾರೆ. ಈಗ admissibility ಮೊದಲಾದ ವಿಷಯಗಳನ್ನು ಕೂಡ Adjournment Motion ವಿಷಯದಲ್ಲಿ ಚರ್ಚೆ ಮಾಡಬೇಕಾಗಿದೆ. ಬೇರೆ ಹಿರಿಯರು ಬರಲಿ ಎಂದು ಹೇಳಿಕಳುಹಿಸುತ್ತಿದ್ದೇವೆ. ಈ ಸಂದರ್ಭದಲ್ಲಿ Finance Minister ಇದ್ದೇ ತೀರಬೇಕೆಂದೇನಿಲ್ಲ. ಅದಕ್ಕೆ ಏನೇನು ಖರ್ಚುಮಾಡಿದ್ದೇವೆ ಎಂಬ ಬಗ್ಗೆ ಸಹ ಹೇಳಲು ತಯಾರಿದ್ದೇವೆ. ಆದರೆ ತಾವು ಹೇಳಿದಂತೆ ಕಾರ್ಯದರ್ಶಿಗಳು, ಮುಖ್ಯಕಾರ್ಯದರ್ಶಿಗಳು ಯಾರಿದ್ದಾರೆ ಅವರನ್ನು ಕರೆಸಲು ನಾನು ಪ್ರಯತ್ನ ಮಾಡುತ್ತೇನೆ. ದಯವಿಟ್ಟು ತಾವು ಒಪ್ಪಿಗೆಯನ್ನು ಕೊಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು initiate ಮಾಡಲಿ. ಇದು ಎಲ್ಲಾ ಕಾಲದಲ್ಲೂ ಇರುವುದೇ. I understand.

ಶ್ರೀ ಸಿದ್ಧರಾಮಯ್ಯ: ನಮ್ಮ ಸಮಾಧಾನಕ್ಕೋಸ್ಕರ ಉತ್ತರ ಕೊಡುವುದು ಬೇರೆ. ನಾನು ಇದ್ದೇನೆ, ನಾನು ಆ ಸಮಿತಿಯ ಅಧ್ಯಕ್ಷನಾಗಿದ್ದೇನೆ, ನಾನು ಉತ್ತರ ಕೊಡಬಲ್ಲೆ, ಅವರು ಉತ್ತರ ಕೊಡಬಲ್ಲರು, ಯಾರು ಇಲ್ಲದಿದ್ದರೂ ನಡೆಯುತ್ತದೆ. ಅಧಿಕಾರಿಗಳು ಇಲ್ಲದಿದ್ದರೂ ನಡೆಯುತ್ತದೆ. ನೀವೂ ಉತ್ತರವನ್ನು ಕೊಡಬಹುದು. ಆದರೆ, ಪ್ರಶ್ನೆ ಇರುವುದೇನೆಂದರೆ ಅತ್ಯಂತ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡುವಾಗ ಸರ್ಕಾರ ಇದನ್ನು ಗಂಬೀರವಾಗಿ ಪರಿಗಣಿಸಬೇಕು. ಸರ್ಕಾರಕ್ಕೆ ಹೆಚ್ಚು ಕಾಳಜಿ ಇರಬೇಕು ಎಂಬುದು ಬಹಳ ಮುಖ್ಯ. ಆ ರೀತಿಯ ಕಾಳಜಿ ವ್ಯಕ್ತವಾಗುತ್ತಿಲ್ಲವೆಂಬುದು ನಮ್ಮ ಆರೋಪ.

ಶ್ರೀ ಎಂ.ಪಿ. ಪ್ರಕಾಶ್: ಅದನ್ನು ಒಪ್ಪಿಕೊಳ್ಳುತ್ತೇನೆ. ತಾವು ಪ್ರಾರಂಭ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ತಾವು Please co-operate. ತಾವು ದಯವಿಟ್ಟು initiate ಮಾಡಿ.

ಶ್ರೀ ವಾಟಾಳ್ ನಾಗರಾಜ್: ಎಲ್ಲಾ ಕಾಲದಲ್ಲೂ ಹೀಗೆ ನಡೆದುಕೊಂಡು ಬಂದಿದೆ ಎಂಬ ಮಾತನ್ನು ತಾವು ಹೇಳಿದಾಗ ನನಗೆ ಎಲ್ಲೋ ಒಂದು ಕಡೆ ನೋವಾಯಿತು. ಎಲ್ಲಾ ಕಾಲದಲ್ಲೂ ಹೀಗೆಯೇ ನಡೆದುಕೊಂಡು ಬಂದಿದೆ, ಈಗಲೂ ಹಾಗೆಯೇ ನಡೆದುಕೊಂಡು ಹೋಗೋಣ ಬಿಡಿ ಎಂದು ತಾವು ಹೇಳಿಬಿಟ್ಟರೆ ನಮ್ಮ ಗತಿ ಏನು? ಪರಿಸ್ಥಿತಿ ಏನು?

ಶ್ರೀ ಎಂ.ಪಿ.ಪ್ರಕಾಶ್: ತಾವು 1967ರಿಂದಲೂ ನೋಡುತ್ತಲೇ ಇದ್ದೀರಿ. ಇಲ್ಲಿ ಹೀಗೆಯೇ ನಡೆದುಕೊಂಡು ಬರುತ್ತಿದೆ. ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಏನಾದರೂ ಬದಲಾವಣೆ ಆಗಿದೆಯೇ? ಎಂಬ ಬಗ್ಗೆ ತಾವೇ ಹೇಳಿ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಹಾಗಾದರೆ ಬದಲಾವಣೆ ಆಗುವುದು ಬೇಡವೇ?

ಶ್ರೀ ಎಂ.ಪಿ.ಪ್ರಕಾಶ್: ಬದಲಾವಣೆ ಬೇಕು, ನಿಜ. ಆದರೆ .....

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಯಾರಾದರೂ ಒಬ್ಬರು ಅದಕ್ಕೆ ಚಾಲನೆ ಕೊಡಬೇಕಲ್ಲವೇ?

ಶ್ರೀ ಎಂ.ಪಿ.ಪ್ರಕಾಶ್: ವಸ್ತುಸ್ಥಿತಿಗೆ ನಾವೆಲ್ಲರೂ ಹೊಂದಿಕೊಳ್ಳಬೇಕು.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಅದು ಸರಿ. ಆದರೆ ಬದಲಾವಣೆ ಆಗಬೇಕೆಂದು ಪ್ರಾಮಾಣಿಕವಾಗಿ ಬಯಸುವವರು ಯಾರಾದರೂ ಒಬ್ಬರು ಅದನ್ನು ಪ್ರಾರಂಭ ಮಾಡಬೇಕಲ್ಲವೇ? ಎಲ್ಲರೂ ಹೀಗೆಯೇ ಹೇಳಿಕೊಂಡು ಹೋದರೆ ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಈಗ ಅದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.....

ಶ್ರೀ ವಾಟಾಳ್ ನಾಗರಾಜ್: 1967ರಲ್ಲಿ ಕೇವಲ 3 ಅಥವಾ 4 ಸದಸ್ಯರು ಮಾತ್ರ ಗೈರು ಹಾಜರಾಗಿರುತ್ತಿದ್ದರು. 200 ಸದಸ್ಯರಾದರೂ ಇಲ್ಲಿ ಕುಳಿತಿರುತ್ತಿದ್ದರು.

ಶ್ರೀ ಎಂ.ಪಿ.ಪ್ರಕಾಶ್: ಈಗ ಇಲ್ಲಿ ಸದಸ್ಯರೂ ಸಹ ಕುಳಿತುಕೊಳ್ಳುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾತನಾಡಲು ಸದಸ್ಯರು ಅಂದು ತುದಿಗಾಲಿನಲ್ಲೇ ನಿಂತಿರುತ್ತಿದ್ದರು.

ಶ್ರೀ ಎಂ.ಪಿ.ಪ್ರಕಾಶ್: ದಯಮಾಡಿ ಮಾತನಾಡಿ.

ಶ್ರೀ ಧರ್ಮಸಿಂಗ್ [ವಿರೋಧ ಪಕ್ಷದ ನಾಯಕರು]: ನನಗೆ ಮಾತನಾಡಿ ಎಂದು ಹೇಳಿ ತಾವೇ ಈಗ ಹೊರಡುತ್ತಿದ್ದೀರಲ್ಲಾ?

ಶ್ರೀ ಎಂ.ಪಿ.ಪ್ರಕಾಶ್: ಅಧಿಕಾರಿಗಳ ಜೊತೆಗೆ ಮಾತನಾಡಲು ತೆರಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಪ್ರಕಾಶ್‌ರವರು ಕೂಡ ಹೋದರೆ ನಾವು ಇಲ್ಲಿ ನಿಂತು ಏನು ಮಾತನಾಡೋಣ? ನಾವು ಪ್ರಸ್ತಾಪ ಮಾಡುವುದನ್ನು ಮುಂದಕ್ಕೆ ಹಾಕುತ್ತೇವೆ. ನಾಳೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬನ್ನಿ, ಮಾನ್ಯ ಯಡಿಯೂರಪ್ಪನವರೂ ಬರಲಿ, ಜೊತೆಗೆ ತಾವೂ ಇರಿ. ತಾವು ಬರಗಾಲ ಸಮಿತಿಯ ಅಧ್ಯಕ್ಷರಾಗಿದ್ದೀರಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಹಣಕಾಸಿನ ಸಚಿವರಾದ ಯಡಿಯೂರಪ್ಪನವರು ಈ ಚರ್ಚೆ ಸಂದರ್ಭದಲ್ಲಿ ಇಲ್ಲಿ ಇರಬೇಕಾದಂತಹ ಅಗತ್ಯವಿಲ್ಲ. I am just trying to see some important officials concerned with this. ಇಲ್ಲಿ Revenue ಕಾರ್ಯದರ್ಶಿಗಳಿದ್ದಾರೆ, ಮಂತ್ರಿಗಳಿದ್ದಾರೆ, ನಾವಿದ್ದೇವೆ. With regard to the maintainability of the Adjournment Motion itself we have our own reservation.

ಶ್ರೀ ಧರ್ಮಸಿಂಗ್: ತಾವು You are a senior Minister of the State. ನೀವೆಲ್ಲಾ ಹೀಗೆ ಮಾಡಿದರೆ ಹೇಗೆ? ಮೊದಲನೇ ದಿವಸವೇ ಹೀಗೆ ಆದರೆ ಹೇಗೆ? ಸದನವನ್ನು ಕರೆಯಲಿಕ್ಕೇ ನೀವು ಬಹಳ ಲೆಕ್ಕಾಚಾರ ಹಾಕಿದಿರಿ. ಮಂತ್ರಿ ಮಂಡಲ ವಿಸ್ತರಣೆ ಮತ್ತು ನಿಗಮ/ಮಂಡಳಿ ನೇಮಕಾತಿ ಬಗ್ಗೆಯೇ ನೀವೆಲ್ಲಾ ಮಾತನಾಡಿಕೊಂಡು ಕುಳಿತಿದ್ದೀರಿ. ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಸರ್ಕಾರ ಏನು ಮಾಡುತ್ತಿದೆ? ಬರಗಾಲ ಸಮಸ್ಯೆ ನೀಗುವ ಬಗ್ಗೆ ನಿಮ್ಮ ಧೋರಣೆ ಏನು? ಎಂಬ ಬಗ್ಗೆ ತಿಳಿದುಕೊಳ್ಳಲು ಆ ವಿಚಾರವನ್ನು ಇಂದು ನಾವು ಸರ್ಕಾರದ ಗಮನಕ್ಕೆ ತರಬೇಕೆಂದರೆ ಇಲ್ಲಿ ಒಬ್ಬರೂ ಇಲ್ಲ. ಹೀಗಿದ್ದರೂ, ಹೇಗಾದರೂ ಮಾಡಿ ನೀವು co-operate ಮಾಡಿ ಎಂದರೆ ಹೇಗೆ? ಯಾವುದರಲ್ಲಿ ನಾವು ನಿಮಗೆ co-operate ಮಾಡಬೇಕು? ಯಾರೂ ಇಲ್ಲದೆ ಬಹಳ ತೊಂದರೆಯಾಗುತ್ತಿದೆ. ಸಂಬಂಧಪಟ್ಟವರು ಯಾರ್ಯಾರಿದ್ದಾರೆ

ಅವರೆಲ್ಲರನ್ನೂ ಕರೆಸಿಬಿಡಿ. ಮಾನ್ಯ ಅಧ್ಯಕ್ಷರು half an hour ಸದನವನ್ನು ಮುಂದೂಡಿ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ನೀವು ಎಲ್ಲರನ್ನೂ ಕೂಡ ಸಂಪರ್ಕ ಮಾಡಿದರೆ ಎಲ್ಲರೂ ಕೂಡ ಬರುತ್ತಾರೆ. ಅಧಿಕಾರಿಗಳೂ ಕೂಡ ಬರಬೇಕು. Chief Secretaryಗೆ ಏನು ಕೆಲಸವಿದೆ? ಜಾಮ್‌ದಾರ್‌ರವರು ಎಲ್ಲಿದ್ದಾರೆ? ಬೇರೆಯವರು ಎಲ್ಲಿದ್ದಾರೆ?

ಶ್ರೀ ಎಂ.ಪಿ.ಪ್ರಕಾಶ್: ಬರುತ್ತಾರೆ. Secretary No.2 ಇಲ್ಲೇ ಇದ್ದಾರೆ.

ಶ್ರೀ ಧರ್ಮಸಿಂಗ್: ಆ ಕಡೆ ನೋಡಿ ಲತಾ ಕೃಷ್ಣರಾವ್‌ರವರೊಬ್ಬರು ಮಾತ್ರ ಇಲ್ಲಿದ್ದಾರೆ. ಆದರೆ ಬೇರೆಯವರು ಎಲ್ಲಿದ್ದಾರೆ? Chief Secretary ಬೇಕಾಗಿಲ್ಲವೇ? Development Commissioner ರವರು ಬೇಕಾಗಿಲ್ಲವೇ?

ಶ್ರೀ ಎಂ.ಪಿ.ಪ್ರಕಾಶ್: ಬರುತ್ತಾರೆ. Both of them are coming.

ಶ್ರೀ ಧರ್ಮಸಿಂಗ್: ಕೃಷಿಗೆ ಸಂಬಂಧಪಟ್ಟ ಹಾಗೆ, Agriculture Secretary ಎಲ್ಲಿದ್ದಾರೆ?

ಶ್ರೀ ವಾಟಾಳ್ ನಾಗರಾಜ್: ನೀವು ಅವರನ್ನು ಕರೆಸಬೇಕಾಗಿಲ್ಲ. ಅವರೇ ಇಲ್ಲಿ ಬಂದು ಕುಳಿತುಕೊಳ್ಳಬೇಕು. ಅಧಿಕಾರಿಗಳ ಜವಾಬ್ದಾರಿ ಅದು. ಅಧಿಕಾರಿಗಳು ಈ ಮಟ್ಟಕ್ಕೆ ಇಳಿದಿದ್ದಾರೆ. ಅಧಿಕಾರಿಗಳು ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳನ್ನು ಯಾವ ಮಟ್ಟಕ್ಕೆ ಇಳಿಸಿದ್ದಾರೆ ಎಂದರೆ, ಅವರು ಜವಾಬ್ದಾರಿಯಿಂದ ವರ್ತಿಸುತ್ತಿಲ್ಲ. ಬಹಳ ಬೇಜವಾಬ್ದಾರಿ ತೋರಿಸುತ್ತಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ನಿನ್ನೆ Adjournment Motion ಕೊಟ್ಟಿದ್ದಾರೆ. ಅದನ್ನು ಇವತ್ತು ತೆಗೆದುಕೊಳ್ಳುತ್ತಾರೆ ಎಂಬ ವಿಷಯ ಈಗತಾನೇ ಗೊತ್ತಾಗಿದೆ. ನಮಗೂ ಕೂಡ ಅದರ copy ಕೊಡಬೇಕಾಗಿತ್ತು. ಅದನ್ನು ನನಗೆ ಈಗ ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್: ನಾವು ಸೂಚನೆಯನ್ನು 10 ಗಂಟೆಗೇ ಕೊಟ್ಟಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್:– ಅದನ್ನು ನಾನು ತೆಗೆದುಕೊಂಡಿದ್ದೇನೆ. ಇಲ್ಲಿಯ ಕಛೇರಿಯಲ್ಲಿ ತೊಂದರೆಯಾಗಿ, ನಾನು 11 ಗಂಟೆಗೆ ನನ್ನ ಕಛೇರಿಗೆ ಬಂದಾಗ ನನಗೆ ಅದರ ಕಾಪಿಯನ್ನು ಕೊಟ್ಟಿದ್ದಾರೆ. Adjournment Motion ಸೂಚನೆ ಬಂದಾಗ ಅದನ್ನು Parliamentary Ministerಗೆ ಕೊಡಬೇಕು. Leader of the Oppositionಗೆ ಕೊಡಬೇಕು ಮತ್ತು ಸಂಬಂಧಪಟ್ಟಂತಹ ಮಂತ್ರಿಗಳಿಗೆ ಕೊಡಬೇಕು ಎಂದು ಇದೆ. ಅದು 11 ಗಂಟೆಗೆ ನನಗೆ ಸಿಕ್ಕಿದೆ.

Sir, they are coming. ಅವರು ಬರುತ್ತಿದ್ದಾರೆ. You please initiate. ಇದು ಎಲ್ಲಾ ಕಾಲದಲ್ಲೂ ಆಗಿರುವಂತಾದ್ದೇ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, Sir, this is an insult to this House. Let some other business be taken up or else you please adjourn the House. This House cannot sit waiting for those VIPs.

SRI M.P.PRAKASH: That is not our point at all. On the contrary, I requested the Leader of the Opposition to take up the discussion. In the meantime they will be coming ಎಂದು ನಾನು ಹೇಳಿದೆ. It is not that we have to wait for them. It is not our job.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು half an hour ಸದನವನ್ನು ಮುಂದೂಡಿ. ಎಲ್ಲರನ್ನೂ ಕರೆಸಿ. Otherwise you take up tomorrow. ಈ ತರಹ ಮಾತನಾಡಿದರೆ ಉಪಯೋಗವಾಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳು ಮತ್ತು ಈಗಿನ ವಿರೋಧ ಪಕ್ಷದ ನಾಯಕರಿಗೆ ಎಲ್ಲಾ ಗೊತ್ತಿದೆ ಮತ್ತು ಅನುಭವವೂ ಇದೆ. ಸಾರ್, ಇಲ್ಲಿ ರೆವಿನ್ಯೂ ಸಚಿವರಿದ್ದಾರೆ ಮತ್ತು ಇನ್ನಿತರ ಹಿರಿಯ ಸಚಿವರುಗಳಿದ್ದಾರೆ. ಇದರ ಜೊತೆಗೆ ಕೋರಂ ಆಗುವಷ್ಟು ಸಂಖ್ಯೆ ಇದೆ. ಬರ ನಿಭಾಯಿಸುವಂತಹ ಕಾರ್ಯದರ್ಶಿಯವರೂ ಸಹ ಅಲ್ಲಿದ್ದಾರೆ. ಖಂಡಿತವಾಗಿಯೂ ನಾವೆಲ್ಲಾ ನಿಮ್ಮ ಮಾತನ್ನು ಕೇಳುತ್ತೇವೆ. ದಯವಿಟ್ಟು ಮಾತನಾಡಿ.

ಶ್ರೀ ಧರ್ಮಸಿಂಗ್: ನೀವೇಕೆ ಮಾತನಾಡುತ್ತೀರಿ? ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, Let the House be adjourned for 15 minutes. They will be here. I have no objection. 15 ನಿಮಿಷ ತಾವು ಸದನವನ್ನು ಮುಂದೂಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, Officers ಬರಲಿಲ್ಲವೆಂದು ತಾವು House adjourn ಮಾಡಿಸುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್: ಅದಲ್ಲ. It is not that question. I have said you can initiate discussion.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಮಾಧುಸ್ವಾಮಿ The debate going on here is that. ಯಾರೋ ಇಬ್ಬರು officers ಬರಲಿಲ್ಲವೆಂದು House adjourn ಮಾಡುವಂತಹ ಕೆಟ್ಟ ಸಂಪ್ರದಾಯವನ್ನೇಕೆ ನೀವು ಹಾಕಲಿಕ್ಕೆ ಹೊರಟಿದ್ದೀರಿ? Are you going to create a precedent? ಅಂತಹ ವಿಚಾರವನ್ನು ನೀವು ಎಲ್ಲಿಯಾದರೂ ಕೇಳಿದ್ದೀರಾ? ದಯವಿಟ್ಟು ಮೊದಲು ಚರ್ಚೆಯನ್ನು initiate ಮಾಡಿಸಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ, ತಾವು ಪ್ರಾರಂಭ ಮಾಡಿ

ಶ್ರೀ ವಾಟಾಳ್ ನಾಗರಾಜ್: ಬರದಿರುವ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ಚರ್ಚೆ ಪ್ರಾರಂಭ ಮಾಡಿಸಿ. ಅಧಿಕಾರಿಗಳು ಇಲ್ಲವೆಂಬ ಕಾರಣಕ್ಕೆ ನಾವು ಮಾತನಾಡುವುದು ಬೇಡವೇ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ನಾಗರಾಜ್‌ರವರೆ, ತಾವೇನು ಮಾತನಾಡುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ನೀವು ಅವರು ಯಾರೂ ಬಂದೇ ಇಲ್ಲ, ನಾವು ಯಾರಿಗೆ ಹೇಳಬೇಕು ಎಂದು ಹೇಳುತ್ತೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈಗ ತಾವು ಇದ್ದೀರಿ. ಚರ್ಚೆ ಪ್ರಾರಂಭಿಸಿ.

ಶ್ರೀ ಎಂ.ಪಿ.ಪ್ರಕಾಶ್: ತಾವು ಆ ರೀತಿ ಹೇಳಲಿಲ್ಲ. You have never interrupted But, both of them said, none of these people responsible are here. To whom we have to address? ಎಂಬ ಮಾತುಗಳನ್ನು ತಾವು ಹೇಳಿದ ಮೇಲೆ, ನಾವು, ಆಯಿತು ಸಾರ್, ನಾವು ಅವರನ್ನು ಕರೆಸುತ್ತೇವೆ, ಅವರು ಬರುತ್ತಿದ್ದಾರೆ, ತಾವು initiate ಮಾಡಿ ಎಂದು ನಿಮ್ಮನ್ನು request ಮಾಡಿಕೊಂಡೆವು. But, if the House so desires, let it be adjourned ಎಂದೂ ಕೂಡ ನಾನು ಹೇಳಿದೆ. What is that we can do now?

ಶ್ರೀ ವಾಟಾಳ್ ನಾಗರಾಜ್: ಸಭೆಯನ್ನು ಮುಂದಕ್ಕೆ ಹಾಕಿ ಎಂದು ನಾವೆಲ್ಲೂ ಹೇಳಿಯೇ ಇಲ್ಲ. ನಾವು ಖಂಡಿತಾ ಆ ಮಾತನ್ನು ಹೇಳಲಿಲ್ಲ. ಯಾವ ಅಧಿಕಾರಿಗಳು ಬರಲಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ನಾವು ಹೇಳಿದೆವು.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು Take action against them.

ಶ್ರೀ ವಾಟಾಳ್ ನಾಗರಾಜ್: ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಇವರು ಬಹಳ ಬೇಜವಾಬ್ದಾರಿ ಅಧಿಕಾರಿಗಳಾಗಿದ್ದಾರೆ. ಮೊದಲನೇ ದಿವಸವೇ ಈ ರೀತಿಯಾದರೆ ಗತಿಯೇನು? ಮುಖ್ಯ ಕಾರ್ಯದರ್ಶಿಯವರು ಎಲ್ಲಿಗೆ ಹೋಗಿದ್ದಾರೆ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ. ಎಲ್ಲರೂ ಬರುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, Sir, It has come to the light only today. This has come in the agenda today. ಆ ಸಂದರ್ಭಕ್ಕೆ everybody ಬೇರೆ ಬೇರೆ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುತ್ತಾರೆ. ಅನೇಕ ಸಂದರ್ಭದಲ್ಲಿ ಮುಖ್ಯ ಕಾರ್ಯದರ್ಶಿಯವರು ಬಂದಿರುವುದಿಲ್ಲ. ಆದರೆ ಹಿಂದೆ ಮುಖ್ಯಮಂತ್ರಿಗಳಾಗಿ ಈಗ Leader of the Opposition ಆಗಿರುವವರು ಇಂತಹ ಮಹತ್ವದ ವಿಚಾರವನ್ನು ಪ್ರಸ್ತಾಪಿಸುತ್ತೇವೆ ಎಂದು ಹೇಳಿದ ಕಾರಣಕ್ಕಾಗಿಯೇ, ಅವರಿಗೆ ಇಲ್ಲಿಗೆ ಬರಲು ಹೇಳಿ ಕಳುಹಿಸಿದ್ದೇವೆ, ಅವರು ಬರುತ್ತಾರೆ. ತಾವು initiate ಮಾಡಿ ಎಂದೂ ಕೂಡ ನಾನು request ಮಾಡಿಕೊಂಡೆ. What more? You also join hands with me and request him. ತಾವೂ ಮಾಡಿ. You please do that.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾವು adjourn ಮಾಡಲಿಕ್ಕೆ ಕೇಳಲಿಲ್ಲ. ಬಾರದಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದಷ್ಟೇ ಹೇಳಿದ್ದೆವು.

ಶ್ರೀ ಎಂ.ಪಿ.ಪ್ರಕಾಶ್: ಆಯಿತು, ಮುಂದೇನು? What is next?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾತನಾಡಿ ಎಂದೇ ನಾವೂ ಕೂಡ ಹೇಳುತ್ತಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್ : ಅವರು ಮಾತನಾಡುವುದಿಲ್ಲ ಎಂದರೆ ನಾವು ಏನು ಮಾಡಬೇಕು? Then we will have to jump. Adjournment

Motion has got precedence over other legislative matters. You can't do that. ಈಗ ನಾವು ಅದನ್ನು ಬಿಟ್ಟು ಬೇರೆ legislative businessಗೆ jump ಮಾಡಲಿಕ್ಕಾಗುತ್ತದೆಯೇ? ಆ ರೀತಿ ನಾವು ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಚರ್ಚೆ stalemate ಆಗುವುದು ಬೇಡ. ತಾವು ದಯಮಾಡಿ ಚರ್ಚೆಯನ್ನು ಶುರು ಮಾಡಿ.

8. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ Chief Secretary ಇಲ್ಲದಿರುವ ಬಗ್ಗೆ we are not serious. ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ serious ಆಗಿ ಇರಬೇಕಲ್ಲವೇ? ತಾವು ಈಗ ಬಂದಿರಿ. House assemble ಆಗಿ 30 minutes ಆದಮೇಲೆ ನೀವು ಬಂದಿದ್ದೀರಿ. ಇವತ್ತು ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆಂದರೆ ನಾವು ಇನ್ಯಾರಿಗೆ ಹೇಳಬೇಕು? ನಾವು ಬಹಳಷ್ಟು ವಿಷಯಗಳನ್ನು ಇವತ್ತು ಹೇಳಬೇಕಾಗಿದೆ. ಪತ್ರಿಕೆಗಳಲ್ಲಿ ಬರತಕ್ಕಂಥ ವಿಚಾರಗಳ ಬಗ್ಗೆಯೂ ಸಹ ನಾವು ಪ್ರಸ್ತಾಪ ಮಾಡಬೇಕಾಗಿದೆ. We have taken a decision. ಇವತ್ತು ಜನರಿಗೆ ತೊಂದರೆ ಆಗತಕ್ಕಂಥ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲು ನಾವು ನಿಂತಿದ್ದೇವೆ. How far you will take? ಅದನ್ನು ನೀವು ಏನು ಮಾಡುತ್ತೀರೋ? ಅದನ್ನು ನೀವು ಹಗುರವಾಗಿ ತೆಗೆದುಕೊಳ್ಳುತ್ತೀರೋ ಅಥವಾ ಗಂಭೀರವಾಗಿ ತೆಗೆದುಕೊಳ್ಳುತ್ತೀರೋ ಎಂಬ ಬಗ್ಗೆ ನಾವು ಹೇಳುತ್ತಿಲ್ಲ. ನಾವು ಏನು ಹೇಳಲಿಕ್ಕೆ ಹೊರಟಿದ್ದೇವೆ ಎಂದರೆ, ಇವತ್ತು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ, ಸರ್ಕಾರ ನಡೆಸತಕ್ಕಂಥ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇರಲಾರದಂತಹ ಪರಿಸ್ಥಿತಿಯಲ್ಲಿ ಗಂಭೀರವಾದಂತಹ ಸಮಸ್ಯೆಯನ್ನು ನಾವು ಹೇಗೆ ಪ್ರಸ್ತಾಪಿಸಲು ಸಾಧ್ಯ? ಇವತ್ತು ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದವರು ಕೊಟ್ಟಿದ್ದಾರೆ, ಪ್ರಸ್ತಾಪ ಮಾಡಲಿದ್ದಾರೆ, ಆದ್ದರಿಂದ ನಾವು ಸದನಕ್ಕೆ ಹೋಗಲೇಬೇಕು ಎಂದು ನಿರ್ಧಾರ ತೆಗೆದುಕೊಂಡು ಬೇರೆ ವಿಚಾರಗಳನ್ನು ದೂರವಿಟ್ಟು ಈ ಸದನಕ್ಕೆ ಬರಲಿಕ್ಕೆ ಆಗುವುದಿಲ್ಲವೇ? ತಾವು ಹಿಂದೆ ಬಂದಿರಲಿಲ್ಲವೇ? ನಾವೂ, ನೀವೂ ಕೂಡಿ